ಪತ್ರಿಕೋದ್ಯಮದಲ್ಲಿ ದೀರ್ಘಕಾಲ ತೊಡಗಿಸಿಕೊಂಡ ಮಂಜುನಾಥ್ ಚಾಂದ್ ಕಥೆಗಾರರು ಕೂಡ. ಫೋಟೊಗ್ರಫಿಯ ಹವ್ಯಾಸ ಜೊತೆಗಿದೆ. ಉಡುಪಿಯ ಮರವಂತೆ ಬಳಿಯಿರುವ ತ್ರಾಸಿ ಅವರ ತವರೂರು. 'ಅಮ್ಮ ಕೊಟ್ಟ ಜಾಜಿ ದಂಡೆ', 'ಕದ ತೆರೆದ ಆಕಾಶ' ಅವರ ಪ್ರಮುಖ ಕೃತಿಗಳು 'ಕಾಡ ಸೆರಗಿನ ಸೂಡಿ' ಅವರ ಕಾದಂಬರಿ. ಪ್ರಸ್ತುತ ಬೆಂಗಳೂರು ನಿವಾಸಿ.

ರೂಪವೇ ಇಲ್ಲ. ಕೈ ಕಾಲುಗಳೇ ಪೀಚಲು ಪೀಚಲಾಗಿ ಕಾಣಿಸುತ್ತಿದ್ದವು. ಡಾಕ್ಟರು ಒಂದು ಬಿಳಿ ಬಟ್ಟೆಯ ನಡುವೆ ಬೊಗಸೆಯಲ್ಲಿ ಹಿಡಕೊಂಡೇ ಹೀಗೊಂದು ಜೀವವನ್ನು ತಂದು ತೋರಿಸಿದ್ದೇ ಅಪ್ಪ-ಅಮ್ಮ ಕನಲಿ ಹೋದರು. ಆಪರೇಶನ್ ನೋವಿನ ನಡುವೆಯೂ ಅಮ್ಮ ಕಣ್ಣು ಮುಚ್ಚಿ ಧೇನಿಸಿದಳು. ಅವಳ ದುಃಖ ಕೊರಳುಬ್ಬಿಕೊಂಡು ಕಣ್ಣಲ್ಲಿ ಧಾರೆಯಾಗಿದ್ದನ್ನು ಕಂಡ ಅಪ್ಪ ಗೋಡೆಗೊರಗಿ ದೃಷ್ಟಿಯನ್ನು ಮೇಲ್ಛಾವಣಿ ಕಡೆಗೆ ನೆಟ್ಟು ನಿಂತುಬಿಟ್ಟರು. ಬರೀ ಕತ್ತಲು, ಅಲ್ಲಿ ಅವರಿಗೆ ಯಾವ ಬೆಳಕೂ ಕಾಣಿಸಲಿಲ್ಲ. ದಗ್ಧವಾಗಿತ್ತು ಮನಸ್ಸು. ಈ ಜೀವ ನಮಗೆ ದಕ್ಕುವುದಿಲ್ಲ ಎಂಬುದು ಅವರಿಗೆ ಖಾತ್ರಿಯಾದಂತಿತ್ತು. ಹಾಗಂತ ಆಸೆ ಮರೆತು ಹೊರಟು ಬಿಡಲು ಸಾಧ್ಯವೇ? ಆ ಕ್ಷಣವೇ ಮಗುವನ್ನು ನೀಲಾ ನೀಲಿ ಬೆಳಕಿನಿಂದ ಆವೃತವಾದ ಗೂಡಿನೊಳಗೆ ಸೇರಿಸಿದರು ವೈದ್ಯರು. ಯಾರೂ ಹತ್ತಿರ ಸುಳಿಯಬಾರದು ಎಂದು ಡಾಕ್ಟರ್ ಕಟ್ಟಪ್ಪಣೆ ಮಾಡಿದರು.

ಅಪ್ಪ ಅಮ್ಮನ ಸನಿಹ ಕುಳಿತು ಮೆತ್ತಗೆ ಅವಳ ಹಸ್ತದೊಳಗೆ ತನ್ನ ಕೈ ಇರಿಸಿದರು. ಆಕೆ ಗಕ್ಕನೆ ಅದನ್ನು ಬಿಗಿಯಾಗಿ ಹಿಡಿದುಕೊಂಡಳು. ಈಗ ಈ ಕ್ಷಣ ನಿನ್ನ ಕೈಯೊಳಗೆ ನನ್ನ ಜೀವವನ್ನೇ ಇಟ್ಟದ್ದೇನಲ್ಲ ಹಾಗೆ. ಅಮ್ಮ- ಅಪ್ಪ ಇದನ್ನೆಲ್ಲ ನೆನೆಸಿಕೊಳ್ಳುತ್ತ ನನ್ನಬಳಿ ಅದೆಷ್ಟು ಸಾರಿ ಹೇಳಿದ್ದರೋ ನೆನಪಿಲ್ಲ ನನಗೆ.

ಅವರಿಬ್ಬರೂ ಬಹಳ ಹೊತ್ತು ಏನನ್ನೂ ಮಾತನಾಡಲಿಲ್ಲ. ಹಾಗೇ ಕೈಯೊಳಗೆ ಕೈಬೆಸೆದು ಕುಳಿತುಬಿಟ್ಟರು. ಅಮ್ಮ ದುಃಖವನ್ನು ಬರಿದುಮಾಡಿಕೊಳ್ಳುವ ಪ್ರಯತ್ನ ಮಾಡಿದಳು. ಅಪ್ಪ ಅವನ್ನೆಲ್ಲ ಎದೆಯೊಳಗೆ ತುಂಬಿಕೊಳ್ಳುವಂತೆ ಉಸಿರೆಳೆದುಕೊಂಡರು.

'ಸುಶೀಲ...!' ಅಂದರು. ಆ ದನಿ ಅವರಿಗೂ ಕೇಳಿಸದಂತಿತ್ತು.

'ಯಾಕೆ ಈ ಕೂಸ ಹೆತ್ತೆ ನಾನು. ಹೇಳಿ? ಹುಟ್ಟುತ್ಲೇ ಎಂಥ ಘೋರ ವೇದನೆ ಅದಕ್ಕೆ. ಬದುಕುವುದಿಲ್ಲ ಅದು. ನನಗೀ ಪಾಪ ಅಂಟಿಕೊಳ್ಳದೇ ಇರದು, ಜೀವನವಿಡೀ ಇದೇ ಕೊರಗಾದೀತು ನನಗೆ...'

'ಹಮ್, ಇಲ್ಲಿ ಎಲ್ಲವೂ ನಿಶ್ಚಿತ ಸುಶೀ! ಕಾಲದ ಕೋಟೆಯೊಳಗೆ ನಾವು ಕಾಯಬೇಕು ಅಷ್ಟೇ. ಚಿಂತಿಸದಿರು. ಈ ಮಗು ಉಳಿಯುತ್ತೆ' ಹಾಗೆ ದೃಢವಾಗಿ ನುಡಿದ ಅಪ್ಪ ಅಲ್ಲಿಂದ ಎದ್ದು ಹೊರಟುಬಿಟ್ಟಿದ್ದರು.

ಹಾಗೆ ಹೇಳಿದ ಅಪ್ಪನಿಗೆ ಭವಿಷ್ಯದ ಚಿತ್ರಣ ಗೊತ್ತಿತ್ತೇ? ಖಂಡಿತವಾಗಿಯೂ ಇಲ್ಲ. ಅವರ ಎದೆಯೊಳಗೂ ಭಯದ ಬೀಜ ಮೊಳಕೆಯೊಡೆದಿತ್ತು. ಆಸೆ ಸತ್ತಿತ್ತು. ಆಗಿನ್ನೂ ಅಪ್ಪನಿಗೆ ಚಿಕ್ಕ ವಯಸ್ಸು. ಅವರ ಮನಸ್ಸಿನ್ನೂ ಪ್ರೀತಿಯ ಗಿಲಕಿಯಿಂದ ಈಚೆ ಬಂದಿದ್ದಿರಲಿಲ್ಲ. ಹೇಗೆ ಸಹಿಸಿಕೊಂಡರೋ. ಆದರೆ, ಇಲ್ಲಿಂದ ಪ್ರತಿ ಕ್ಷಣವನ್ನೂ ಅಳು ನುಂಗಿ ಬದುಕಬೇಕು ಎಂಬುದು ಅವರಿಗೆ ಅರ್ಥವಾಗಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಆ ಜೀವ ಒಂದೊಂದೇ ಉಸಿರಿನ ಕಣ ಹಿಡಿದು ಹೇಗೆ ಬದುಕಿ ಬರುವುದೋ ಎಂದು ಯೋಚಿಸುತ್ತಾ ದಿಗಿಲಾದರು. ಈ ಡಾಕ್ಟರ್‌ಗಳು ಇನ್ನು ಅದರ ಒಂದೊಂದು ವರಸೆಗೂ ಒಂದೊಂದು ಹೆಸರಿಡುತ್ತಾರೆ. ಅದರ ನಿದ್ದೆಗೊಂದು, ಎಚ್ಚರಕ್ಕೊಂದು, ಉಸಿರಿಗೊಂದು. ಮುಂದಿನ ಅಷ್ಟೂ ದಿನ ಅವರು ಅಕ್ಷರಶಃ ಹಾಗೇ ಮಾಡಿದರು. ಅದು ಎಚ್ಚರವಿದೆಯೇ, ನಿದ್ದೆ ಮಾಡಿತೇ, ಅತ್ತಿತೇ, ಹಸಿದೀತೇ ತಿಳಿಯುವುದಾದರೂ ಹೇಗೆ? ಓ ಅಷ್ಟು ದೂರದಲ್ಲಿರುವ ಇನ್‌ಕ್ಯೂಬೇಟರ್‌ನ ನೀಲ ಬೆಳಕಿನೊಳಗೆ ಒಂದು ಹಕ್ಕೀ ಮರಿ ಮಲಗಿದಂತೆ ಕಾಣುತ್ತಿತ್ತು. ಬದುಕು-ಸಾವು ಎರಡೂ ಆ ಗೂಡಿನೊಳಗೆ ಬಂದಿಯಾಗಿದೆ ಅನಿಸುತ್ತಿತ್ತು. ಅದರತ್ತ ಮತ್ತೆ ಮತ್ತೆ ಇಣುಕುವ ಅಮ್ಮ ನಿರ್ಲಿಪ್ತ ನೋಟ ಬೀರಿ ಮೌನಕ್ಕೆ ಶರಣಾಗುತ್ತಿದ್ದಳು.

'ಅದರ ಚರ್ಮ ಈಗ ಬಲಿತಿರಬಹುದೇ? ಕೈ ಬೆರಳುಗಳು ಚಿಗುರಿರಬಹುದೇ? ಕಣ್ಣು ಮಿಟುಕಿಸುತ್ತಿರಬಹುದೇ?' ಎಂಬ ಕುತೂಹಲದ